404 (651) ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ (ಬೆಳ್ಳಾವಿ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು (3) ಹಣಕಾಸು ವರ್ಷದಲ್ಲಿ ಅಬಕಾರಿ ಮೂಲದಿಂದ ಸರ್ಕಾರಕ್ಕೆ ಪಾವತಿಯಾಗಿರುವ ಹಣವೆಷ್ಟು (ವರ್ಷವಾರು ವಿವರ ನೀಡುವುದು) :

ಆ) ಸರ್ಕಾರಕ್ಕೆ ಬರಬೇಕಾದ ಮೊತ್ತವೆಷ್ಟು :

ಇ) ಬರಬೇಕಾದ ಬಾಕಿ ಮೊತ್ತವನ್ನು ವಸೂಲು ಮಾಡಲು ಕೈಗೊಂಡಿರುವ ಕ್ರಮವೇನು;

ಈ) ಬಾಕಿ ವಸೂಲಿ ಮಾಡುವ ಬಗ್ಗೆ ಸರ್ಕಾರವು ಕಾಲಮಿತಿಯನ್ನೇನಾದರು ಹಾಕಿಕೊಂಡಿದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯ ಮಂತ್ರಿಗಳು) :

ಅ) ಕಳೆದ ಮೂರು ವರ್ಷಗಳಲ್ಲಿ ಅಬಕಾರಿ ಮೂಲದಿಂದ ಸರ್ಕಾರಕ್ಕೆ ಬಂದ ಆದಾಯದ ವಿವರಗಳು:

ವರ್ಷ	ಆದಾಯ (ರೂ. ಕೋಟಿಗಳಲ್ಲಿ)
2003–04	ರೂ. 2,364–90
2004–05	ರೂ. 2,831–34
2005–06	ರೂ. 3,414–94

ಆ) ಸರ್ಕಾರಕ್ಕೆ ಬರಬೇಕಾಗಿದ್ದ ಮೊತ್ತ

ವರ್ಷ	ಮೊತ್ತ (ಗುರಿ) (ರೂ. ಕೋಟಿಗಳಲ್ಲಿ)
2003–04	ರೂ. 2,346–23
2004–05	ರೂ. 2,750–00
2005–06	ರೂ. 3,347–72

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

405 (652) ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ (ಬೆಳ್ಳಾವಿ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹಣಕಾಸು ಸಂಸ್ಥೆ (ಕೆಎಸ್ಎಫ್ಸಿ)ಯ ವತಿಯಿಂದ ಏಕಕಾಲಿಕೆ ತೀರುವಳಿ ಯೋಜನೆಯ ಅನ್ವಯ ತೀರ್ಮಾನವಾಗಿರುವ ಪ್ರಕರಣಗಳ ವಿವರ ನೀಡುವುದು (ಕಳೆದ 3 ಆರ್ಥಿಕ ಹಣಕಾಸು ವರ್ಷಗಳ ವಿವರ ನೀಡುವುದು):

ಆ) ಸರ್ಕಾರದಿಂದ ಬಿಡುಗಡೆಯಾಗುವ ಸಹಾಯಧನವನ್ನು ಏಕಕಾಲಿಕೆ ತೀರುವಳಿ ಯೋಜನೆಯಲ್ಲಿ ಉದ್ದಿಮೆದಾರರಿಗೆ ನೀಡದೇ ಕಾನೂನು ಬಾಹಿರವಾಗಿ ಸಂಸ್ಥೆಗೆ ಹಣ ಜಮಾ ತೆಗೆದುಕೊಂಡಿರುವ ಬಗ್ಗೆ ಸಂಪೂರ್ಣ ವಿವರ ನೀಡುವುದು :